# ಆಧುನಿಕೋತ್ತರ ಕಾಲದ ಮಹಿಳೆಯರ ಸಂವೇದನೆ

**ಎಂ. ನಂಜುಂಡಸ್ವಾಮಿ**

ಸಹಾಯಕ ಪ್ರಾಧ್ಯಾಪಕ, ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯ, ಬಾಗಲಕೋಟೆ.

**DOI: https://doi.org/10.5281/zenodo.18698870**

**ABSTRACT:**

ಆಧುನಿಕೋತ್ತರ ಕಾಲಘಟ್ಟದಲ್ಲಿ ಮಹಿಳಾ ಸಂವೇದನೆಯು ಪಾರಂಪರಿಕ ಮೌನವನ್ನು ಮುರಿದು, ಪ್ರತಿರೋಧದ ಮತ್ತು ಅಸ್ತಿತ್ವದ ದೃಢವಾದ ದನಿಗೂಡಿಸಿದೆ. 1960ರ ದಶಕದ ನಂತರದ ಸಾಹಿತ್ಯಿಕ ಮತ್ತು ಬೌದ್ಧಿಕ ಬದಲಾವಣೆಗಳು ಸ್ತ್ರೀಯರ ಅನುಭವಗಳಿಗೆ ಹೊಸ ಆಯಾಮವನ್ನು ನೀಡಿವೆ. ಪಿತೃಪ್ರಧಾನ ವ್ಯವಸ್ಥೆ, ಕೌಟುಂಬಿಕ ದೌರ್ಜನ್ಯ ಮತ್ತು ಧಾರ್ಮಿಕ ಕಟ್ಟುಪಾಡುಗಳ ವಿರುದ್ಧದ ಸಂಘರ್ಷವು ಇಲ್ಲಿ ಪ್ರಧಾನವಾಗಿ ವ್ಯಕ್ತವಾಗಿದೆ. ಕೇವಲ ಸಹನಶೀಲರಾಗಿ ಉಳಿಯದೆ, ಸ್ತ್ರೀಯರು ತಮ್ಮ ಹಕ್ಕು, ಘನತೆ ಮತ್ತು ಸ್ವಾಯತ್ತತೆಗಾಗಿ ನಡೆಸುವ ಬೌದ್ಧಿಕ ಹೋರಾಟವನ್ನು ಕನ್ನಡದ ಪ್ರಮುಖ ಲೇಖಕಿಯರ ಕೃತಿಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ. ದೇಹ ರಾಜಕೀಯ ಮತ್ತು ಲೈಂಗಿಕತೆಯ ಕುರಿತಾದ ಮುಕ್ತ ಚರ್ಚೆಗಳು ಸ್ತ್ರೀವಾದಿ ಚಿಂತನೆಗೆ ಹೊಸ ಬುನಾದಿ ಹಾಕಿದ್ದು, ಸಾಹಿತ್ಯವು ಮಹಿಳಾ ಬದುಕಿನ ಸಂಕೀರ್ಣತೆಗಳನ್ನು ಮತ್ತು ಆತ್ಮವಿಶ್ವಾಸದ ಹೆಜ್ಜೆಗಳನ್ನು ಸಮರ್ಥವಾಗಿ ದಾಖಲಿಸಿದೆ.

**KEYWORDS:**

ಆಧುನಿಕೋತ್ತರ ಮಹಿಳಾ ಸಂವೇದನೆ, ಪಿತೃಪ್ರಧಾನ ವ್ಯವಸ್ಥೆ, ಸ್ತ್ರೀವಾದಿ ಸಾಹಿತ್ಯ, ದೇಹ ರಾಜಕೀಯ, ಅಸ್ತಿತ್ವದ ಹುಡುಕಾಟ.

ಆಧುನಿಕೋತ್ತರ ಕಾಲ ಎಂದರೆ – ಆಧುನಿಕತೆಯ ನಂತರದ ಅವಧಿ. ಸುಮಾರು 1960ರ ದಶಕದ ನಂತರ ಕಲೆ ಮತ್ತು ವಾಸ್ತುಶಿಲ್ಪ, ತತ್ತ್ವಶಾಸ್ತ್ರ ಮತ್ತು ಸಿದ್ಧಾಂತ, ಸಾಮಾಜಿಕ ಚಲನೆಗಳಲ್ಲಿ ಆಧುನಿಕತೆಯ ಆದರ್ಶಗಳು ಮತ್ತು ರಚನೆಗಳನ್ನು ಪ್ರಶ್ನಿಸುವ ಒಂದು ಸಾಂಸ್ಕೃತಿಕ ಹಾಗೂ ಬೌದ್ಧಿಕ ವಿದ್ಯಮಾನವಾಗಿದೆ. ಹಳೆಯ ಕಲಾ ಹಾಗೂ ಸಾಂಪ್ರದಾಯಿಕ ಪ್ರಕಾರಗಳನ್ನು ಅಣಕಿಸುತ್ತಾ ವಿವಿಧ ಶೈಲಿಗಳನ್ನು ಒಟ್ಟಿಗೆ ಸೇರಿಸುತ್ತಾ, ಭಾಷೆ ಮತ್ತು ಶಕ್ತಿಯಿಂದ ಸತ್ಯವನ್ನು ಹೇಗೆ ನಿರ್ಮಿಸಲಾಗುತ್ತದೆ ಎಂಬುದರ ಮೇಲೆ ಕೇಂದ್ರೀಕರಿಸುತ್ತಾ ಒಂದೇ ಸತ್ಯ ಅಲ್ಲ, ಬಹುತ್ವ ಸತ್ಯಗಳಿವೆ ಎಂಬುದನ್ನು ನಿರೂಪಿಸುತ್ತಾ ವೈವಿಧ್ಯತೆಯನ್ನು ಪ್ರತಿಬಿಂಬಿಸುವ ಕಾಲಘಟ್ಟ. ಇದರ ಹಿನ್ನೆಲೆಯನ್ನು ಗಮನಿಸಿದಾಗ ಈ ಹಂತದಲ್ಲಿ ಸಾಹಿತ್ಯವು ಏಕಸತ್ಯ, ಪುರುಷಕೇಂದ್ರಿತ ಮೌಲ್ಯಗಳು, ಪಿತೃತ್ವ ವ್ಯವಸ್ಥೆಗಳನ್ನು ಆರಂಭಿಸಿತು. ಕುಟುಂಬ, ಮದುವೆ, ಸಂಪ್ರದಾಯ ಆಚರಣೆ, ಧರ್ಮ ಮತ್ತು ನೈತಿಕತೆಯ ಹೆಸರಿನಲ್ಲಿ ಮಹಿಳೆಯರ ಮೇಲೆ ಹೇರಲಾಗುತ್ತಿದ್ದ ಕಟ್ಟುಪಾಡುಗಳು ಆಧುನಿಕ ಯುಗದಲ್ಲಿಯೂ ಮುಂದುವರೆಯಬೇಕೆಂಬ ಆಕಾಂಕ್ಷೆಗಳು ಪ್ರಬಲವಾಗಿದ್ದವು. ಈ ದೈನಂದಿನ ಅನುಭವಗಳ ವಿರುದ್ಧ ಉಂಟಾದ ಅಸಮಾಧಾನವೇ ಆಧುನಿಕೋತ್ತರ ಮಹಿಳಾ ಸಂವೇದನೆಗೆ ದಾರಿ ಮಾಡಿಕೊಟ್ಟಿತು.

ಸ್ತ್ರೀವಾದಿ ಚಿಂತನೆ ಗಾಢವಾಗಿ ಬೆರೆತು ಹೊಸ ಸಂವೇದನೆಯನ್ನು ರೂಪಿಸುವುದರ ಜೊತೆಗೆ ಆಧುನಿಕೋತ್ತರ ಕಾಲದ ಮಹಿಳಾ ಸಂವೇದನೆಯು ಮಹಿಳೆಯರ ಸ್ವಂತ ಅನುಭವ, ಹೋರಾಟ ಮತ್ತು ಸಮಾನತೆಯ ಕನಸಿನಿಂದ ರೂಪುಗೊಂಡ ಒಂದು ಶಕ್ತಿಶಾಲಿ ಸಾಹಿತ್ಯಕ

ಮತ್ತು ಸಾಮಾಜಿಕ ಚಳವಳಿಯಾಗಿ ರೂಪ ಪಡೆಯಿತು. ಪುರುಷ ಪ್ರಧಾನ ಸಮಾಜದ ಶೋಷಣೆ, ಅನ್ಯಾಯದ ವಿರುದ್ಧ ಮಹಿಳೆಯರ ಪ್ರತಿರೋಧ, ಆತ್ಮಗೌರವ ಮತ್ತು ಅಸ್ತಿತ್ವದ ಹುಡುಕಾಟದಲ್ಲಿ ಆಳವಾದ ಪರಿಣಾಮವನ್ನುಂಟು ಮಾಡಿತು. ಆಧುನಿಕ ಶಿಕ್ಷಣ, ಜಾಗತೀಕರಣ ಮತ್ತು ಸಾಂಸ್ಕೃತಿಕ ಬದಲಾವಣೆಗಳಿಂದ ಸ್ಫೂರ್ತಿ ಪಡೆದು, ತನ್ನ ನೋವು, ಕನಸು, ಹೋರಾಟಗಳನ್ನು ಸಾಹಿತ್ಯದ ಮೂಲಕ ವ್ಯಕ್ತಪಡಿಸುತ್ತಾ, ಲಿಂಗ ಸಮಾನತೆ ಮತ್ತು ಸ್ವಾತಂತ್ರ್ಯದ ಕಡೆಗೆ ಸಾಗುವ ಮಹತ್ವಾಕಾಂಕ್ಷೆಯ ಹಿನ್ನೆಲೆಯನ್ನು ಹೊಂದಿತು.

ಆಧುನಿಕೋತ್ತರ ಮಹಿಳಾ ಸಂವೇದನೆಯ ಮತ್ತೊಂದು ಹಿನ್ನೆಲೆಯೆಂದರೆ, ದೇಹ ರಾಜಕೀಯ, ಸ್ತ್ರೀದೇಹವನ್ನು ಪಾಪ ಅಥವಾ ವಸ್ತುವಾಗಿ ಕಾಣುವ ಸಮಾಜದ ದೃಷ್ಟಿಕೋನಕ್ಕೆ ವಿರುದ್ಧವಾಗಿ ದೇಹವನ್ನು ಸ್ತ್ರೀಯ ಸ್ವಂತ ಅನುಭವ ಮತ್ತು ಅಸ್ತಿತ್ವದ ಭಾಗವಾಗಿ ನೋಡುವ ಚಿಂತನೆ ಬೆಳೆಯಿತು. ಇದರಿಂದ ಮಹಿಳೆಯರು ತಮ್ಮ ದೇಹ ಲೈಂಗಿಕತೆ ಮತ್ತು ಮಹತ್ವದ ಕುರಿತು ನೇರವಾಗಿ, ನಿರ್ಭೀಡೆಯಿಂದ ಬರೆಯಲು ಪ್ರಾರಂಭಿಸಿದರು. ವರ್ಗ, ಜಾತಿ, ಧರ್ಮ ಮತ್ತು ಪ್ರದೇಶವಾರು ವ್ಯತ್ಯಾಸಗಳು ಮಹಿಳಾ ಅನುಭವಗಳನ್ನು ವಿಭಿನ್ನವಾಗಿಸುತ್ತಾ, ಎಲ್ಲ ಮಹಿಳೆಯರ ಅನುಭವ ಒಂದೇ ಅಲ್ಲ ಎಂಬ ಅರಿವು ಆಧುನಿಕೋತ್ತರ ಕಾಲದಲ್ಲಿ ಬಲವಾಯಿತು. ಸ್ತ್ರೀಯರ ಅನುಭವಾಧಾರಿತ ಬರವಣಿಗೆಗಳು, ಸ್ತ್ರೀಯ ಆತ್ಮಕಥನದ ಹೆಚ್ಚಳವು ಮಹಿಳಾ ಸಂವೇದನೆಯ ಬೆಳವಣಿಗೆಗೆ ಕಾರಣವಾಗುತ್ತಾ, ಇಲ್ಲಿಯವರೆಗೆ ಮೌನವಾಗಿದ್ದ ಸ್ತ್ರೀಯ ವೈಯಕ್ತಿಕ ಅನುಭವಗಳು ತದನಂತರ ಬರವಣಿಗೆ ಮೂಲಕ ಸಾರ್ವಜನಿಕ ವಲಯಕ್ಕೆ ಬಂದವು. ಇದು ಸಾಹಿತ್ಯವನ್ನು ಹೆಚ್ಚು ನೈಜ ಮತ್ತು ಮಾನವೀಯವಾಗಿಸಿತು.

ಇಂತಹ ಪರಿಸ್ಥಿತಿಯಲ್ಲಿ ಸ್ತ್ರೀಯರು ಸಾಹಿತ್ಯವನ್ನು ಅವಲೋಕಿಸುವ, ಅಭ್ಯಸಿಸುವ, ವಿಮರ್ಶಿಸುವ ಮತ್ತು ರಚಿಸುವ ರೀತಿ–ನೀತಿಗಳಲ್ಲಿ ಬದಲಾವಣೆಗಳು ಏಕೆ? ಆಗಬಾರದೆಂದು ಯೋಚಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಅವರು ವ್ಯಕ್ತಪಡಿಸಿದ ಹೊಸ ರೀತಿ–ನೀತಿ–ನೋಟವು ಸ್ತ್ರೀ ಸಂವೇದನೆ ಎಂದೇ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಗುರುತಿಸಿಕೊಂಡಿತು. ಆಧುನಿಕೋತ್ತರ ಮಹಿಳಾ ಸಾಹಿತ್ಯವು ಮಹಿಳೆಯರ ಅನುಭವಗಳ ವಿಭಿನ್ನ ನೆಲೆಯನ್ನು ಅನ್ವೇಷಿಸಿ, ಸಾಂಪ್ರದಾಯಿಕ ಮೌನವನ್ನು ಮುರಿದು ತನ್ನದೇ ಆದ ಧ್ವನಿಯಲ್ಲಿ ಮಾತನಾಡುವ ಮಾರ್ಗವನ್ನು ಕಂಡುಕೊಂಡರು. ಸಾಂಪ್ರದಾಯಿಕ, ಲಿಂಗಸಮಾನತೆ ಮತ್ತು ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧ ತಮ್ಮದೇ ಆದ ಮಾರ್ಗದಲ್ಲಿ ಪ್ರತಿರೋಧಿಸುತ್ತಾ, ಶೋಷಣೆ, ಅನ್ಯಾಯ ಮತ್ತು ಅಸಮಾನತೆಯ ಪ್ರಶ್ನೆಗಳನ್ನು ತಮ್ಮ ಅನುಭವಗಳ ಮೂಲಕ ಪ್ರಶ್ನಿಸುತ್ತಾ, ಅಸ್ತಿತ್ವದ ಸ್ತ್ರೀವಾದಿ ಚಿಂತನೆಗಳ ಪ್ರಭಾವದಿಂದ ರೂಪುಗೊಂಡು, ಆತ್ಮವಿಶ್ವಾಸ, ಸ್ವತಂತ್ರ ದೃಷ್ಟಿಕೋನ ಮತ್ತು ವೈಯಕ್ತಿಕ ನೋವು–ನಲಿವುಗಳ ಅಭಿವ್ಯಕ್ತಿಯ ಮೂಲಕ ಒಂದು ಸಾಹಿತ್ಯಿಕ ಮಹತ್ವಕಾಂಕ್ಷೆ ಯೋಜನೆಯನ್ನು ನಿರ್ಮಿಸಿಕೊಂಡರು.

ಆಧುನಿಕೋತ್ತರ ಕಾಲದ ಸ್ತ್ರೀವಾದಿ ಸಾಹಿತ್ಯವು ಮಹಿಳೆಯರನ್ನು ಕೇವಲ ಸಹನಶೀಲ, ತ್ಯಾಗಮಯ ಪಾತ್ರಗಳಾಗಿ ಬಿಂಬಿಸುವ ಪರಂಪರೆಯನ್ನು ಮುರಿದು, ಸಾಂಸಾರಿಕ ಬದುಕಿನಲ್ಲಿ ಮಹಿಳೆಯರು ಅನುಭವಿಸುವ ಮಾನಸಿಕ ಒತ್ತಡ, ಹಿಂಸೆ, ನಿರಾಕರಣೆ ಮತ್ತು ಅಸ್ತಿತ್ವದ ಸಂಕಟಗಳು ಮಹಿಳಾ ಸಾಹಿತ್ಯದಲ್ಲಿ ನೇರವಾಗಿ ವ್ಯಕ್ತವಾಗುತ್ತವೆ. ಉದಾಹರಣೆಗೆ ವೈದೇಹಿ ಅವರ ಕಥೆಗಳು ಗೃಹ ಬಂಧನದೊಳಗೆ ಸಿಲುಕಿರುವ ಮಧ್ಯಮ ವರ್ಗದ ಸ್ತ್ರೀಯ ಮನೋವ್ಯಥೆಯನ್ನು ಸೂಕ್ಷ್ಮವಾಗಿ ಚಿತ್ರಿಸುತ್ತವೆ. ಕಥೆಯಲ್ಲಿ ಬರುವ ವೈದೇಹಿಯವರ ಪಾತ್ರಗಳು ಬಂಡಾಯ ಮಾಡುವುದಕ್ಕಿಂತ ಮೊದಲು ಆಂತರಂಗಿಕವಾಗಿ ತೊಳಲಾಡುವ ಮಾನಸಿಕ ಸಂಘರ್ಷಗಳು ಆಧುನಿಕೋತ್ತರ ಸ್ತ್ರೀ ಸಂವೇದನೆಯ ಪ್ರತಿಬಿಂಬಗಳಾಗಿವೆ.

ವೈದೇಹಿಯವರ ಕಥಾ ಸಾಹಿತ್ಯದಲ್ಲಿ ಗೃಹ ಬಂಧನದೊಳಗೆ ಸಿಲುಕಿರುವ ಸ್ತ್ರೀಯರ ಮನಸ್ಥಿತಿ ಸೂಕ್ಷ್ಮವಾಗಿ ವ್ಯಕ್ತವಾಗುತ್ತದೆ. 'ಮನೆಯ ಗೋಡೆಗಳೊಳಗಿನ ಮೌನವೇ ಸ್ತ್ರೀಯರ ಅತಿದೊಡ್ಡ ಜೈಲು' ಎಂಬ ಮಾತಿನಲ್ಲಿ ಮಹಿಳೆಯರ ಅಂತರಾಳದ ಮನಃಸ್ಥಿತಿಯನ್ನು ಎತ್ತಿತೋರಿಸುತ್ತದೆ. ಇಲ್ಲಿ ಸ್ತ್ರೀ ಬಂಡಾಯ ಘೋಷಿಸುವುದಕ್ಕಿಂತ ಮೊದಲು ತನ್ನೊಳಗಿನ ಅಸಮಾಧಾನವನ್ನು ಅರಿಯುವ ಹಂತದಲ್ಲಿದ್ದು, ಲಿಂಗ ಪರ್ಯಾಯವಾದ ಸಾಮಾಜಿಕ ಸ್ಥಿತಿಗಳನ್ನು ವಿವರಿಸಲು ವ್ಯವಸ್ಥೆಯ ವಿರುದ್ಧ ಧ್ವನಿಯೆತ್ತುತ್ತಾರೆ.

ಪಿತೃಪ್ರಧಾನ ವ್ಯವಸ್ಥೆಯನ್ನು ವಿರೋಧಿಸುವುದು ಆಧುನಿಕೋತ್ತರ ಮಹಿಳಾ ಸಂವೇದನೆಯ ಗುರಿಯಾಗಿತ್ತು. ಕುಟುಂಬ, ಮದುವೆ, ಸಂಪ್ರದಾಯ ಹಾಗೂ ಧರ್ಮದ ಹೆಸರಿನಲ್ಲಿ ಸ್ತ್ರೀಯ ಮೇಲೆ ಹೇರಲಾಗಿರುವ ನಿಯಂತ್ರಣಗಳನ್ನು ಪ್ರತಿರೋಧಿಸುವುದು ಆಧುನಿಕೋತ್ತರ ಮಹಿಳಾ ಲೇಖಕಿಯರ ಧೋರಣೆಯಾಗಿತ್ತು. ಸಾ.ರಾ. ಅಬೂಬಕ್ಕರ್ ಅವರ ಕಥೆಗಳಲ್ಲಿ ಮುಸ್ಲಿಂ ಸಮಾಜದ ಸ್ತ್ರೀಯರ ಬದುಕನ್ನು ಚಿತ್ರಿಸುತ್ತಾ "ಧರ್ಮ ಸ್ತ್ರೀಯರಿಗೆ ಆಶ್ರಯವಾಗಬೇಕಿತ್ತು; ಆದರೆ ಅದು ಅವರ ಮೌನದ ಗೋಡೆಯಾಗಿ ಪರಿಣಮಿಸಿದೆ." (ಚಂದ್ರಗಿರಿಯ ತೀರದಲ್ಲಿ) ಎಂಬ ಉಲ್ಲೇಖ ಧರ್ಮ–ಪಿತೃತ್ವ–ಸ್ತ್ರೀ ಸಂಬಂಧದ ಸಂಕೀರ್ಣತೆಯನ್ನು ತೋರಿಸುತ್ತದೆ. ಕಥೆಯಲ್ಲಿ ಸ್ತ್ರೀಯರ ಸ್ವಾತಂತ್ರ್ಯ, ಶಿಕ್ಷಣ ಧಾರ್ಮಿಕ ನಿಯಮಗಳು ಮತ್ತು ಪಾರಂಪರಿಕ ಸಮಾಜದ ಅಡ್ಡಿ ಬಿಕ್ಕಟ್ಟಿನ ನಡುವಿನ ಸಂಘರ್ಷವನ್ನು ಎತ್ತಿಹಿಡಿಯುತ್ತದೆ. ಇಲ್ಲಿ ಸ್ತ್ರೀಯರು ಕೇವಲ ಬಲಿಗಳಲ್ಲ; ತಮ್ಮ ಬದುಕಿನ ಅರ್ಥವನ್ನು ಹುಡುಕುವ ಚಿಂತನೆಯುತ ವ್ಯಕ್ತಿತ್ವಗಳಾಗಿದ್ದಾರೆ.

ಮಹಿಳಾ ಜೀವನದ ಒಳ ಹೊರಗಿನ ಸಂಕೀರ್ಣತೆಗಳನ್ನು ನೇರವಾಗಿ, ಧೈರ್ಯವಾಗಿ ಹಾಗೂ ಪ್ರಶ್ನಾತ್ಮಕವಾಗಿ ನಿರೂಪಿಸಿದ ಲೇಖಕಿಯರಲ್ಲಿ ಗೀತಾ ನಾಗಭೂಷಣ ಅವರು ಪ್ರಮುಖ ಸ್ಥಾನ ಪಡೆದಿದ್ದಾರೆ. ಅವರ ಸಾಹಿತ್ಯದಲ್ಲಿ ವ್ಯಕ್ತವಾಗುವ ಮಹಿಳಾ ಸಂವೇದನೆ ಕೇವಲ ಭಾವನಾತ್ಮಕವಲ್ಲ; ಅದು ಸಾಮಾಜಿಕ, ಸಾಂಸ್ಕೃತಿಕ ಮತ್ತು ಅಸ್ತಿತ್ವಾತ್ಮಕ ಆಯಾಮಗಳನ್ನು ಒಳಗೊಂಡ ಆಳವಾದ ಸಂವೇದನೆಯಾಗಿದೆ. ಗೀತಾ ನಾಗಭೂಷಣ ಅವರ ಕಥೆಗಳಲ್ಲಿ ಮಹಿಳೆ ಮನೆತನಕ್ಕೆ ಸಂಬಂಧಿಸಿದ ಪಾತ್ರವಲ್ಲ. ಹೆಣ್ಣು ಗೃಹಬಂಧನದೊಳಗಿನ ಮೌನದ ನೋವು, ಸಂಬಂಧಗಳೊಳಗಿನ ಅಸಮಾನತೆ, ಪತಿ–ಕುಟುಂಬ–ಸಮಾಜದ ನಿರೀಕ್ಷೆಗಳ ನಡುವಿನ ಒತ್ತಡಗಳನ್ನು ಅನುಭವಿಸುವ ಜೀವಂತ ವ್ಯಕ್ತಿಯಾಗಿದ್ದಾಳೆ. ಮನೆ ಮಹಿಳೆಗೆ ಆಶ್ರಯವಾಗಬೇಕಾಗಿತ್ತಾದರೂ ಅದೇ ಮನೆಯೇ ಆಕೆಗೆ ಬಂಧನವಾಗುವ ಸ್ಥಿತಿಯನ್ನು ಅವರು ನಿರ್ಭಯವಾಗಿ ತಮ್ಮ ಕಥೆಗಳಲ್ಲಿ ಚಿತ್ರಿಸುತ್ತಾರೆ. "ಮನೆಯ ಗೋಡೆಗಳು ಮಹಿಳೆಯ ಮಾತುಗಳನ್ನು ಹೀರಿಕೊಂಡು ಮೌನವನ್ನು ಮಾತ್ರ ಉಳಿಸಿಕೊಳ್ಳುತ್ತವೆ; (ಸಾಹಿತ್ಯಿಕ ದೃಷ್ಟಿಕೋನ) ಇಲ್ಲಿ ಮೌನವನ್ನು ಮಹಿಳೆಯ ಅತಿ ದೊಡ್ಡ ಪೀಡನೆಯ ರೂಪವಾಗಿ ನೋಡುತ್ತಾರೆ. ಮಹಿಳೆ ತನ್ನ ದೇಹದ ಮೇಲೆ, ತನ್ನ ಮನಸ್ಸಿನ ಮೇಲೆ ಹಾಗೂ ತನ್ನ ಬದುಕಿನ ನಿರ್ಧಾರಗಳ ಮೇಲೆ ಹಕ್ಕು ಹೊಂದಿರಬೇಕು ಎಂಬ ವಿಚಾರವನ್ನು ಒತ್ತಿ ಹೇಳುತ್ತಾರೆ.

ಮುಂದುವರೆದು, ಆಧುನಿಕೋತ್ತರ ಕಾಲಘಟ್ಟದಲ್ಲಿ ಸ್ತ್ರೀಯರ ಕೌಟುಂಬಿಕ ಜೀವನದಲ್ಲಿ ಹೊಸ ದೃಷ್ಟಿಕೋನವನ್ನು ಕಾಣಬಹುದು. ಈ ಕಾಲದಲ್ಲಿ ಕುಟುಂಬ ಎನ್ನುವುದು ಕೇವಲ ಗಂಡ–ಹೆಂಡತಿ ಮಕ್ಕಳ ಚೌಕಟ್ಟಿಗೆ ಸೀಮಿತವಾಗಿಲ್ಲ. ಏಕಪೋಷಕ ಕುಟುಂಬ, ಪುನರ್‌ವಿವಾಹ, ಜೀವನ ಸಂಗಾತಿಯ ಆಯ್ಕೆ ಮುಂತಾದ ಹೊಸ ರೂಪಾಂತರಗಳನ್ನು ಕಾಣಬಹುದು. ಪಾರಂಪರಿಕ ಕುಟುಂಬಗಳಲ್ಲಿ ಮಹಿಳೆಯ ಮೌನವನ್ನು ಶಿಸ್ತು–ಸಹನೆ ಎಂದು ಹೇಳಲಾಗುತ್ತಿತ್ತು ಆದರೆ, ಆಧುನಿಕೋತ್ತರ ಮಹಿಳೆ ಆ ಮೌನವನ್ನು ಪ್ರಶ್ನಿಸುತ್ತಾಳೆ.

ಮನೆಯೊಳಗಿನ ಅಡುಗೆ, ಆರೈಕೆ ಮತ್ತು ಸಂರಕ್ಷಣೆಯ ದುಡಿಮೆಗಳಿಗೆ ಆರ್ಥಿಕ ಮೌಲ್ಯವಿಲ್ಲದ ಕೆಲಸವೆಂದು ಕಾಣಲಾಗುತ್ತಿತ್ತು. ಆಧುನಿಕೋತ್ತರ ಮಹಿಳಾ ಚಿಂತನೆ ಇದನ್ನು ಪ್ರಶ್ನಿಸಿ, ಗೃಹ ಕಾರ್ಯವೂ ಶ್ರಮವೇ ಎಂಬ ಅರಿವು ಮೂಡಿಸುತ್ತದೆ. ಕುಟುಂಬದಲ್ಲಿ ಸಮಾನ ಜವಾಬ್ದಾರಿಯ ಬೇಡಿಕೆ ಇಲ್ಲಿ ಪ್ರಮುಖವಾಗಿದೆ. ಮಹಿಳೆ ತಾಯಿಯಾಗಿ, ಹೆಂಡತಿಯಾಗಿ ಮಾತ್ರವಲ್ಲದೆ ಸ್ವತಂತ್ರ ವ್ಯಕ್ತಿಯಾಗಿ ಬದುಕಲು ಬಯಸುತ್ತಾಳೆ. ಹೆಣ್ಣಿನ ಮನಸ್ಸಿಗೆ ನೆಲೆಯಾದ ದೇಹದ ಮೇಲೆಯೇ ಅವರಿಗೆ ಹಕ್ಕಿಲ್ಲ ಎಂದಾಗ ಪುರುಷನ ಆಸ್ತಿ ಹಕ್ಕಿನಲ್ಲಿ ಸೇರಿ ಹೋಗುವ ಮನೆಯ ಮೇಲೆ ಅವಳಿಗೆ ಅಧಿಕಾರ? ಈ ಮನೆ ಹೆಣ್ಣಿಗೆ ನೆಮ್ಮದಿಯ ಆಗರವಾಗದೇ 'ಅಡ್ಡಡ್ಡ ಗೋಡೆಗಳಾಗುವುದು' ಕುಟುಂಬ ವ್ಯವಸ್ಥೆಯ ಹುಳುಕಿಗೆ ಕನ್ನಡಿ ಹಿಡಿಯುತ್ತದೆ.

**ಸುತ್ತಿಕೊಂಡಿದ್ದೆನೆ ಒಂದು ಮನೆ**
**ಬೆಳಕಿಂಡಿಗಳಿಲ್ಲ! ಭದ್ರ ಬಾಗಿಲು ಇಲ್ಲ**
**ಕಂಬಗಳಂತೂ ಇಲ್ಲವೇ ಇಲ್ಲ**
**ಎಷ್ಟು ಕೂಗಿದರೂ ಧ್ವನಿ ಮುಟ್ಟುವುದಿಲ್ಲ**
**ಮಾರ್ಧನಿ ಹುಟ್ಟುವುದಿಲ್ಲ.**

**(ಮಾಲತಿ ಪಟ್ಟಣಶೆಟ್ಟಿ – ಗರಿಗೆದರಿ ತಂದ ಬದುಕು)**

ಆಧುನಿಕೋತ್ತರ ಮಹಿಳೆಯ ಕೌಟುಂಬಿಕ ಜೀವನದಲ್ಲಿ ಮೌನವೇ ಪ್ರಮುಖ ಪಾತ್ರವಹಿಸುತ್ತದೆ. ಗೃಹಹಿಂಸೆ, ಭಾವನಾತ್ಮಕ ದೌರ್ಜನ್ಯ, ಅಸಮಾನತೆಗಳ ಬಗ್ಗೆ ಬಹಿರಂಗವಾಗಿ ಮಾತನಾಡಲಾಗದೆ, ಕುಟುಂಬದ ಗೌರವದ ಹೆಸರಿನಲ್ಲಿ ಮೌನವನ್ನು ಕಾಯಲಾಗುತ್ತದೆ. ಈ ಮೌನವೇ ಮಹಿಳೆಯ ಅಂತರಂಗದ ನೋವನ್ನು ಮತ್ತಷ್ಟು ಗಾಢಗೊಳಿಸುತ್ತದೆ.

ಆಧುನಿಕೋತ್ತರ ಮಹಿಳಾ ಸಾಹಿತ್ಯದ ಪ್ರಮುಖ ವಿಚಾರವೆಂದರೆ–ದೇಹ ರಾಜಕೀಯ. ದೇಹದ ಮೇಲೆ ಸಮಾಜ ಮತ್ತು ಪುರುಷರ ಹಕ್ಕು ಎಂಬ ಕಲ್ಪನೆಯನ್ನು ಆಧುನಿಕೋತ್ತರ ಸ್ತ್ರೀವಾದಿ ಸಾಹಿತ್ಯ ತೀವ್ರವಾಗಿ ಪ್ರಶ್ನಿಸುತ್ತದೆ.

**'ನಮ್ಮ ದೇಹ ಹಾಸಿಗೆ ಮಾಡಿ**
**ಬೆಳಗಾಗ ಮುರುಟಿಸಿ ಹೋದದ್ದು**
**ಹಂಗಿಲ್ಲದುಂಟು ಎಂಜಲು ಒಗೆದು**
**ಬಿಸಿಲುಗುದುರೆಯನೇರಿ ಹಾರಿದ್ದು**
**(ಶೀಲ ಅಯೋಲ– ಮತ್ತೇ ಚಿಗುರುವೆವು)**
**ವೇಷ ಮಾಡುತ್ತಾ ಒಮ್ಮೆ ಬಂದವರು**
**ಮತ್ತೆ ವೇಷ ಮರೆಸಿ ಬಂದು**
**ನಮ್ಮ ಮೊಸರಕುಡಿಕಿಗೇ ಕಿಮ್ಮತ್ತು ಕಟ್ಟುತ್ತಾರೆ.**

**(ಮಾಧವಿ ಭಂಡಾರಿ– ವೇಷದವರು)**

ಪುರುಷನ ಲೈಂಗಿಕ ಸ್ವೇಚ್ಛಾಚಾರದ ಬಗ್ಗೆ ಮಹಿಳಾ ಸಾಹಿತಿಗಳು ಗಟ್ಟಿಯಾಗಿ ನಿಂತು ನೇರವಾಗಿ ಛೀಮಾರಿ ಹಾಕಿ, ಶೋಷಣೆಯ ನಯ–ನಾಜೂಕನ್ನು ಎತ್ತಿ ತೋರಿಸುತ್ತಾ, ತಮ್ಮ ವಿರೋಧವನ್ನು ವ್ಯಕ್ತಪಡಿಸತೊಡಗಿದರು. ಸಾಂಪ್ರದಾಯಿಕವಾಗಿ ಗುಪ್ತವಾಗಿಡಲಾಗುತ್ತಿದ್ದ ಮಹಿಳಾ ಶರೀರ ಮತ್ತು ಲೈಂಗಿಕತೆಯ ಬಗ್ಗೆ ಮುಕ್ತವಾದ ಚರ್ಚೆಗಳು ಈ ಕಾಲದಲ್ಲಿ ಆರಂಭವಾದವು. ಹೆಣ್ಣಿನ ಮೇಲೆ ನಡೆಯುವ ಲೈಂಗಿಕ ಶೋಷಣೆ, ದೈಹಿಕ ಸ್ವಾಯತ್ತತೆಯ ಬಗ್ಗೆ ಧೈರ್ಯವಾಗಿ ಬರೆಯುವ ಪ್ರವೃತ್ತಿಯನ್ನು ಬೆಳೆಸಿಕೊಂಡರು.

ಹೆಣ್ಣು ತನ್ನ ಇಡೀ ಬದುಕನ್ನು ಕುಟುಂಬಕ್ಕಾಗಿ ಸವೆಸುವುದರಲ್ಲಿ ಸಾರ್ಥಕ ಪಡೆಯುವ ಕಾಲಹೊಂದಿತ್ತು. ಈಗ ಅದರಲ್ಲಿ ಸ್ವ-ಸಂತೋಷ ಕಾಣದಾಗಿ, ಗೃಹದಾಸ್ಯ ಅನುಭವಿಸಿ ಅದರಿಂದ ಹೊರಬರಲು ಹಾತೊರೆಯುತ್ತಿದ್ದಾಳೆ. ಮಾತೃತ್ವ, ಪತ್ನಿತ್ವಗಳಿಂದ ಕಳಕೊಂಡ ಪುರುಷನಂತೆ ತನ್ನ ಶಿಕ್ಷಣ ಉದ್ಯೋಗಗಳಲ್ಲಿ ಯಶಸ್ಸನ್ನು ಬಯಸತೊಡಗಿದ್ದಾಳೆ.

**ನಿನ್ನ ಬಟ್ಟೆಬರೆ ಕೋಣೆ ಓರಣಿಸಿ**
**ಕೊರಳಿಗೆ ಜೋತುಬಿದ್ದು! ಮುತ್ತಿನ ಸರ ತೋಳುಬಂದಿ**
**ಸಗ್ಗಕ್ಕೆ ಕಿಚ್ಚು.**
**ಸ. ಉಷಾ-ತೊಗಲುಗೊಂಬೆಯ ಆತ್ಮಕಥೆ**

ಈ ಕಾಲಘಟ್ಟದಲ್ಲಿ ಮಹಿಳೆಯ ಶಿಕ್ಷಣ ಮತ್ತು ಉದ್ಯೋಗವು ಹೆಚ್ಚಿದರೂ ಅದರೊಂದಿಗೆ ದ್ವಂದ್ವ ಭಾರವೂ ಹೆಚ್ಚಾಗಿದೆ. ಆತ್ಮಕಥನ, ಕಥೆ, ಕವಿತೆಗಳ ಮೂಲಕ ತನ್ನ ಕೌಟುಂಬಿಕ ಅನುಭವಗಳನ್ನು ಹೇಳಿಕೊಳ್ಳುತ್ತಾಳೆ. ಕುಟುಂಬದೊಳಗಿನ ಅಸಮಾನತೆ, ಮತ್ತು ಪಿತೃತ್ವ ನಿಯಂತ್ರಣಗಳನ್ನು ಪ್ರಶ್ನಿಸುವ ಧೈರ್ಯ ಆಧುನಿಕೋತ್ತರ ಮಹಿಳೆಯ ಕೌಟುಂಬಿಕ ಸಂವೇದನೆಯ ಮುಖ್ಯ ಲಕ್ಷಣವಾಗಿತ್ತು.

**ಕನ್ನಡಿಯ ಬೀರ ಬಲೆ ಕತ್ತರಿಸಿ**
**ತಲೆ ನಿಮಿರಿ ಮಳೆಹನಿಯ ಗುಟುಕರಿಸಿ**
**ಬೇರೂರುವಾಸೆ ಸುಡುಬಿಸಿಲಿಗೆ ಹಸಿರಾಗಿ ಸೊಕ್ಕುವಾಸೆ.**
**(ಸ.ಉಷಾ ತೊಗಲುಗೊಂಬೆಯ ಆತ್ಮಕಥೆ')**

ಇಲ್ಲಿ ಆಧುನಿಕೋತ್ತರ ಮಹಿಳೆಯ ಆತ್ಮವಿಶ್ವಾಸ, ಧೈರ್ಯ ಹೆಚ್ಚುತ್ತಿರುವುದನ್ನು ಅವರ ಸಾಹಿತ್ಯಗಳಲ್ಲಿ ಸ್ಪಷ್ಟವಾಗಿ ಕಾಣಬಹುದು. ಒಟ್ಟಾರೆ ಕನ್ನಡ ಸಾಹಿತ್ಯದಲ್ಲಿ ಆಧುನಿಕೋತ್ತರ ಕಾಲದ ಸ್ತ್ರೀವಾದಿ ಸಂವೇದನೆ ಸ್ತ್ರೀಯರನ್ನು ಕೇವಲ ಶೋಷಣೆಗೆ ಒಳಗಾಗಬಹುದಾದ ಪಾತ್ರಗಳಾಗಿ ಚಿತ್ರಿಸದೇ, ವ್ಯವಸ್ಥೆಯನ್ನು ಪ್ರಶ್ನಿಸುವ, ಚಿಂತಿಸುವ ಮತ್ತು ಪ್ರತಿರೋಧಿಸುವ ವ್ಯಕ್ತಿತ್ವಗಳಾಗಿ ರೂಪಿಸುತ್ತದೆ. ಈ ಸಂವೇದನೆ ಕನ್ನಡ ಸಾಹಿತ್ಯವನ್ನು ಹೆಚ್ಚು ಮಾನವೀಯ, ವೈವಿಧ್ಯಮಯ ಹಾಗೂ ವಿಮರ್ಶಾತ್ಮಕವಾಗಿಸಿದೆ ಎಂಬುದು ಸ್ಪಷ್ಟ.

**ಪರಾಮರ್ಶನ ಗ್ರಂಥಗಳು:**

1. ವಿಜಯಾ ದಬ್ಬೆ, (1989), ಮಹಿಳಾ ಸಾಹಿತ್ಯದಲ್ಲಿ ಪ್ರತಿಭಟನೆ, ಮೈಸೂರು: ರಚನಾ ಪ್ರಕಾಶನ.
2. ಸರ್ವಮಂಗಳಾ ಚ., (1975), ಮಹಿಳೆ ಮತ್ತು ಕನ್ನಡ ಸಾಹಿತ್ಯ, ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ.
3. ಕರ್ನಾಟಕ ಸಾಹಿತ್ಯ ಅಕಾಡೆಮಿ (ಸಂ), (1998), ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದ ಚಿಂತನೆ (ಸ್ತ್ರೀವಾದ), ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
4. ಗಾಯತ್ರಿ ಎನ್., (1985), ಮಹಿಳೆ: ಬಿಡುಗಡೆ ಹಾದಿಯಲ್ಲಿ, ಬೆಂಗಳೂರು: ನವಕರ್ನಾಟಕ ಪ್ರಕಾಶನ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.